ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1203
ಸದಸ್ಯರ ಹೆಸರು	:	ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ	:	22.09.2021.
ಉತ್ತರಿಸುವ ಸಚಿವರು	:	ಉಪ ಲೋಕೋಪಯೋಗಿ ಸಚಿವರು

.ಸಂ	ಪ್ರಶ್ನೆ	ಉತ್ತರ
ಅ)	ಮೈಸೂರು–ಬೆಂಗಳೂರು ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಯಾವಾಗ ಪರಿವರ್ತನೆ ಮಾಡಲಾಯಿತು;	ಭಾರತ ಸರ್ಕಾರವು ರಾಜ್ಯ ಹೆದ್ದಾರಿ–17 (ಬೆಂಗಳೂರು – ಮೈಸೂರು ವಿಭಾಗ ಬಂಟ್ವಾಳದವರೆಗೆ) ಅನ್ನು ದಿನಾಂಕ: 04.03.2014 ರಂದು ರಾಷ್ಟ್ರೀಯ ಹೆದ್ದಾರಿ–275 ಎಂದು ಘೋಷಿಸಿರುತ್ತಾರೆ. ಸದರಿ ರಾಷ್ಟ್ರೀಯ ಹೆದ್ದಾರಿ–275ರ ಬೆಂಗಳೂರು ಮೈಸೂರು ಭಾಗದ ಹೆದ್ದಾರಿಯನ್ನು ಅಗಲಗೊಳಿಸಲು ವಿಸ್ತೃತ ಯೋಜನಾ ವರದಿ (DPR) ತಯಾರಿಸಲು ದಿನಾಂಕ:10.10.2014 ರಂದು ಸಮಾಲೋಚಕರಿಗೆ ವಹಿಸಿ, ಸದರಿ ರಸ್ತೆಯ ಅಲೈನ್‌ಮೆಂಟ್‌ಗೆ ಕೇಂದ್ರ ಭೂಸಾರಿಗೆ ಮಂತ್ರಾಲಯದಿಂದ ಅನುಮೋದನೆಯನ್ನು ಪಡೆಯಲಾಗಿರುತ್ತದೆ. ನಂತರ ಯೋಜನಾ ವರದಿಯನ್ನು ಕೇಂದ್ರ ಭೂಸಾರಿಗೆ ಮಂತ್ರಾಲಯದ ಸೂಚನೆ ಅನುಸಾರ ದಿನಾಂಕ: 31.05.2016 ರಲ್ಲಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಮುಂದಿನ ಅಭಿವೃದ್ಧಿಗಾಗಿ ಹಸ್ತಾಂತರಿಸಲಾಗಿದೆ. ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಪಡೆದ ಮಾಹಿತಿಯಂತೆ ಬೆಂಗಳೂರು – ಮೈಸೂರು ರಸ್ತೆಯ ಅಭಿವೃದ್ಧಿಯನ್ನು 2 ಪ್ಯಾಕೇಜ್‌ಗಳನ್ನಾಗಿ ವಿಂಗಡಿಸಿ ಈ ಕೆಳಕಂಡಂತೆ ಯೋಜನೆಯನ್ನು ಕೈಗೊಂಡಿರುತ್ತಾರೆ. <u>ಪ್ಯಾಕೇಜ್ –1</u> ಬೆಂಗಳೂರಿನಿಂದ ನಿಡಘಟ್ಟ ವರೆಗೆ ಅಂದಾಜು ಮೊತ್ತ (ಸಿವಿಲ್) – ರೂ.3501.00 ಕೋಟಿ ಒಟ್ಟು ಉದ್ದ –56.20 ಕಿಮೀ ಪ್ರಗತಿ – 47.00 ಕಿ.ಮೀ. ಡಿ.ಬಿ.ಎಂ. ವರೆಗೆ ಮುಕ್ತಾಯಗೊಂಡಿರುತ್ತದೆ. ಭೌತಿಕ ಪ್ರಗತಿ – ಶೇ.80 <u>ಪ್ಯಾಕೇಜ್ –2</u> ನಿಡಘಟ್ಟದಿಂದ ಮೈಸೂರುವರೆಗೆ ಅಂದಾಜು ಮೊತ್ತ (ಸಿವಿಲ್) – ರೂ.3816.72 ಕೋಟಿ ಒಟ್ಟು ಉದ್ದ –61.104 ಕಿಮೀ ಪ್ರಗತಿ – 30.00 ಕಿ.ಮೀ. ಡಿ.ಬಿ.ಎಂ ವರೆಗೆ. ಮುಕ್ತಾಯಗೊಂಡಿರುತ್ತದೆ. ಭೌತಿಕ ಪ್ರಗತಿ – ಶೇ.75
ಆ)	ಸದರಿ ರಸ್ತೆಯನ್ನು ದಶಪಥ ರಸ್ತೆಯ ಯೋಜನೆಯಾಗಿ ಯಾವಾಗ ರೂಪಿಸಲಾಯಿತು;	
ಇ)	ಸದರಿ ದಶಪಥ ರಸ್ತೆ ಯೋಜನೆ ರೂಪುರೇಷಗಳೇನು; ಹಾಗೂ ಅಂದಾಜು ಮೊತ್ತವೆಷ್ಟು; (ವಿವರ ನೀಡುವುದು);	

ಈ)	ಸದರಿ ಕಾಮಗಾರಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಪ್ಯಾಕೇಜ್-1 ಬೆಂಗಳೂರಿನಿಂದ ನಿಡಘಟ್ಟ ವರೆಗಿನ 56.20 ಕಿಮೀ ಉದ್ದ ಇರುವ ರಸ್ತೆಯ ಕಾಮಗಾರಿಯನ್ನು ದಿನಾಂಕ: 14.05.2019 ಮತ್ತು ಪ್ಯಾಕೇಜ್-2 ನಿಡಘಟ್ಟದಿಂದ ಮೈಸೂರುವರೆಗೆ 61.104 ಕಿಮೀ ಉದ್ದ ಇರುವ ರಸ್ತೆಯ ಕಾಮಗಾರಿಯನ್ನು ದಿನಾಂಕ:10.12.2019 ರಂದು ಪ್ರಾರಂಭಿಸಲಾಗಿರುತ್ತದೆ. ಕಾಮಗಾರಿಗಳ ನಿಗದಿತ ನಿರ್ಮಾಣದ ಅವಧಿಯು ಪ್ರಾರಂಭಿತ ದಿನಾಂಕದಿಂದ 2.5 ವರ್ಷಗಳಾಗಿರುತ್ತದೆ. ಆದರೆ ಕೋವಿಡ್-19 ರ ಪಿಡುಗಿನ ಕಾರಣದಿಂದ ಕಾಮಗಾರಿಯ ಮುಕ್ತಾಯ ದಿನಾಂಕವನ್ನು ಪ್ಯಾಕೇಜ್ 1ಕ್ಕೆ 02.05.2022 ಮತ್ತು ಪ್ಯಾಕೇಜ್-2ಕ್ಕೆ 07.09.2022ಕ್ಕೆ ಮರುನಿಗದಿಸಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ.
ಉ)	ರಸ್ತೆ ಆಸುಪಾಸಿನಲ್ಲಿರುವ ಹಳ್ಳಿಗಳ ಜನಸಾಮಾನ್ಯರಿಗೆ ಸಂಚರಿಸುವುದಕ್ಕೆ ತೊಂದರೆಯಾಗದಂತೆ ಕೆಳಸೇತುವೆ (ಅಂಡರ್ ಪಾಸ್) ನಿರ್ಮಾಣವನ್ನು ವೈಜ್ಞಾನಿಕವಾಗಿ ಎಷ್ಟು ಕಿ.ಮೀ. ಅಂತರದಲ್ಲಿ ಅಳವಡಿಸಲಾಗುತ್ತಿದೆ;	ರಾಷ್ಟ್ರೀಯ ಹೆದ್ದಾರಿ-275 ರ ಬೆಂಗಳೂರು - ಮೈಸೂರು ಭಾಗದ ಯೋಜನೆಯ ಅಂದಾಜು ಪಟ್ಟಿಯಲ್ಲಿ ಒಟ್ಟು 73 ಕೆಳ ಸೇತುವೆ (ಅಂಡರ್ ಪಾಸ್) ಹಾಗೂ 12 ಮೇಲ್ಸೇತುವೆ (ಓವರ್ ಪಾಸ್) ಗಳಿಗೆ ಅನುವು ಮಾಡಿಕೊಂಡಿದ್ದು ಸ್ಥಳೀಯ ಜನರಿಗೆ ಮತ್ತು ಹಳ್ಳಿಯ ಪ್ರದೇಶದ ಜನರಿಗೆ ಎಕ್ಸ್‌ಪ್ರೆಸ್ ರಸ್ತೆಯ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸುರಕ್ಷಿತವಾಗಿ ಓಡಾಡಲು ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ.
ಊ)	ಯಾವ ಕಾಲಮಿತಿಯಲ್ಲಿ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು	ಪ್ಯಾಕೇಜ್-1 ಬೆಂಗಳೂರಿನಿಂದ ನಿಡಘಟ್ಟ ವರೆಗಿನ 56.20 ಕಿಮೀ ಉದ್ದ ಇರುವ ರಸ್ತೆಯ ಕಾಮಗಾರಿಯನ್ನು ದಿನಾಂಕ: 14.05.2019 ಮತ್ತು ಪ್ಯಾಕೇಜ್-2 ನಿಡಘಟ್ಟದಿಂದ ಮೈಸೂರುವರೆಗೆ 61.104 ಕಿಮೀ ಉದ್ದ ಇರುವ ರಸ್ತೆಯ ಕಾಮಗಾರಿಯನ್ನು ದಿನಾಂಕ:10.12.2019 ರಂದು ಪ್ರಾರಂಭಿಸಲಾಗಿರುತ್ತದೆ. ಕಾಮಗಾರಿಗಳ ನಿಗದಿತ ನಿರ್ಮಾಣದ ಅವಧಿಯು ಪ್ರಾರಂಭಿತ ದಿನಾಂಕದಿಂದ 2.5 ವರ್ಷಗಳಾಗಿರುತ್ತದೆ. ಆದರೆ ಕೋವಿಡ್ 19 ರ ಕಾರಣದಿಂದ ಕಾಮಗಾರಿಯ ಮುಕ್ತಾಯ ದಿನಾಂಕವನ್ನು ಪ್ಯಾಕೇಜ್ 1 ಕ್ಕೆ 02.05.2022 ಮತ್ತು ಪ್ಯಾಕೇಜ್-2ಕ್ಕೆ 07.09.2022 ಕ್ಕೆ ಮರುನಿಗದಿಸಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ.

ಕಡತ ಸಂಖ್ಯೆ: ಲೋಇ 233 ಸಿಎನ್‌ಹೆಚ್ 2021 (ಇ)

(ಸಿ.ಸಿ.ಪಾಟೀಲ)
ಲೋಕೋಪಯೋಗಿ ಇಲಾಖೆ